# 29-11-2023

# ಕನ್ನಡ ರಾಜ್ಯೋತ್ಸವ












ಸಮೃದ್ಧಿ ಕರ್ನಾಟಕ
ಸಮೃದ್ಧಿ ಕರ್ನಾಟಕ



























ದಿನಾಂಕ:೨೯.೧೧.೨೦೨೩ರ ಬುಧವಾರದಂದು ನಮ್ಮ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಮುಖ್ಯ ಅತಿಥಿಗಳಾದ ಡಾ.ಗುರುಸ್ವಾಮಿ.ಆರ್‌ರವರು ಕಾರ್ಯಕ್ರಮವನ್ನುದ್ದೇಶಿಸಿ ಕನ್ನಡ ನಾಡಿನ ಶ್ರೀಮಂತಿಕೆ ಮತ್ತು ಇತಿಹಾಸದ ಬಗ್ಗೆ ಮಾತನಾಡಿದರು ಹಾಗೂ ಕನ್ನಡ ಭಾಷಾ ಪ್ರೇಮವನ್ನು ತಿಳಿಸಿಕೊಟ್ಟರು. ಕನ್ನಡ ನಾಡಿನ ಶ್ರೀಮಂತಿಕೆ ಮತ್ತು ಇತಿಹಾಸವನ್ನು ತಿಳಿಸಿಕೊಟ್ಟರು ಹಾಗೂ ಜ್ಞಾನಪೀಠ ವಿಜೇತರನ್ನು ನೆನೆಯುತ್ತಾ, ಶಿವರಾಮ ಕಾರಂತರು ಮತ್ತು ಕುವೆಂಪುರವರ ಬರವಣಿಗೆಯನ್ನು ಸ್ಮರಿಸಿದರು. ಕನ್ನಡ ನಾಡು ನುಡಿಯ ಬಗ್ಗೆ ಜಾಗೃತಗೊಳಿಸುತ್ತಾ ಇಂಗ್ಲೆಂಡಿನ ಬಿ.ಎಲ್.ರೈಸ್‌ರವರಿಗಿದ್ದ ಕನ್ನಡಾಭಿಮಾನವನ್ನು ತಿಳಿಸಿದರು. ಜೆ.ಪಿ.ರಾಜರತ್ನಂ, ಮಧ್ವಾಚಾರ್ಯರು, ಶಂಕರಾಚಾರ್ಯರು ಹಾಗೂ ಇನ್ನಿತರ ವಿದ್ವಾಂಸರನ್ನು ಸ್ಮರಿಸುತ್ತಾ ಕನ್ನಡ ಅಭಿಮಾನ ಕೇವಲ ಕನ್ನಡ ರಾಜ್ಯೋತ್ಸವದ ದಿನ ಮಾತ್ರ ಸೀಮಿತವಾಗಬಾರದೆಂದು ಹೇಳಿದರು. ಹಾಗೆಯೇ ಕೊನೆಯಲ್ಲಿ ಕರ್ನಾಟಕಕ್ಕೆ ಬೇರೆಯವರು ಅತಿಥಿಯಾಗಿ ಬರಲಿ ಹೊರತು ಯಜಮಾನರಾಗಲ್ಲ ಎಂದು ಹೇಳಿದರು.

ಅಧ್ಯಕ್ಷತೆಯ ಭಾಷಣವನ್ನು ಪ್ರಾಚಾರ್ಯರಾದ ಡಾ.ಎಸ್.ಮರೀಗೌಡರವರು ಕಾರ್ಯಕ್ರಮವನ್ನು ಉದ್ದೇಶಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸ್ನಾತಕೋತ್ತರ ಕೇಂದ್ರದ ವಿಭಾಗ ಮುಖ್ಯಸ್ಥರಾದ ಡಾ.ಎಸ್.ಪೂರ್ಣಿಮ, ಸಹಾಯಕ ಪ್ರಾಧ್ಯಾಪಕರಾದ ಶ್ರೀ.ಪ್ರಶಾಂತ್ ಕುಮಾರ್ ಜಿ, ಶ್ರೀಮತಿ ಅನುಷ ಎಂ.ಸಿ ಅವರು ಉಪಸ್ಥಿತರಿದ್ದ ಕಾರ್ಯಕ್ರಮವನ್ನು ವಿದ್ಯಾರ್ಥಿನಿಯರಾದ ಕು.ಶಿಲ್ಪಶ್ರೀ ಹಾಗೂ ಕು.ಸುಶ್ಮಿತ ಅವರ ನೃತ್ಯ ಪ್ರದರ್ಶನದ ಮೂಲಕ ಉದ್ಘಾಟಿಸಲಾಯಿತು. ಕು.ರೂಪ ಅವರು ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀ.ದಿನೇಶ್.ಬಿ ಅವರು ನಿರೂಪಿಸಿ ಕು. ಪ್ರಗತಿ.ಯು.ಕೆ ವಂದಿಸಿದರು.